ಅಪರೂಪಕ್ಕೆ ತೌರುಮನೆಗೆ ಹೋದರೆ ನಾಲ್ಕು ದಿನಕ್ಕೆ ಜೀವ ಈ ಕಡೆಗೆ ತುಡಿಯುತ್ತದೆ. ಎಲ್ಲೋ ತನ್ನದಲ್ಲದ ಜಾಗದಲ್ಲಿ ಸಿಕ್ಕಿಕೊಂಡಂತೆನಿಸುತ್ತದೆ. ನೋಡಿ ಕಲಿಯಬೇಕು ಕೇತಕಿಯನ್ನು. ಮುಲಾಜು ಅನ್ನುವುದು ಇಲ್ಲವೇ ಇಲ್ಲ. ದೀರ್ಘಕಾಲ ಬಿಟ್ಟು ಹೋದ ಸ್ವಗೃಹವನ್ನು ಒಪ್ಪ ಓರಣಗೊಳಿಸಿ ತನ್ನಿಚ್ಛೆಗೆ ತಕ್ಕಂತೆ ಒಗ್ಗಿಸಿಕೊಳ್ಳುವವಳಂತೆ ಯಜಮಾನಿಕೆಯ ಸೂತ್ರ ಕೈಗೆತ್ತಿಕೊಂಡು ಬಿಡುತ್ತಾಳೆ. ಅಡುಗೆಮನೆಯ ಸಾಮ್ರಾಜ್ಯದ ಒಡತಿಯಾಗುತ್ತಾಳೆ. ಅಲ್ಲಿದ್ದದ್ದು ಇಲ್ಲಿಟ್ಟು, ಇಲ್ಲಿದ್ದಿದ್ದನ್ನು ಅಲ್ಲಿಟ್ಟು, ಅವಳು ಹೊರಟು ಹೋದ ಮೇಲೆ ತನ್ನ ಕೈಯಳವಿನಲ್ಲಿ ಸಾಮಾನು ಸರಂಜಾಮುಗಳನ್ನು ಹೊಂದಿಸಿಕೊಳ್ಳಲು ಕೆಲ ದಿನ ಬೇಕಾಗುತ್ತದೆ ಶ್ರಾವಂತಿಗೆ. ಅಡುಗೆಮನೆ ಮಾತ್ರವೇ, ಇಡೀ ಮನೆಯೆಂಬೋ ಮನೆ ದೂಳು, ಬಲೆಗಳಿಂದ ಮುಕ್ತವಾಗಿ, ಬೆಡ್‌ಸ್ಪ್ರೆಡ್ಡು, ಕರ್ಟನ್ನುಗಳು ಕೊಳೆ ಕಳೆದುಕೊಂಡು, ಇಸ್ತ್ರಿ ತಿಕ್ಕಿಸಿಕೊಂಡು, ನಕುಲನ ಮುಖ ಕೂಡಾ ಮನೆಯಂತೆಯೇ ಲಕಲಕಿಸುವುದಲ್ಲವೇ?

"ಕೆಲಸದವರು ಅಂದ್ರೆ ಎಷ್ಟಾದ್ರೂ ಕೆಲಸದವರೇ..." ಎಂದು ಕೇತಕಿಯನ್ನು ಪರೋಕ್ಷವಾಗಿ ಶ್ಲಾಘಿಸುವವನು ತನ್ನನ್ನು ಹೀಗಳೆದಂತೆನಿಸುವುದು ಯಾಕೆ? ಗೊತ್ತಾಗುವುದಿಲ್ಲ ಶ್ರಾವಂತಿಗೆ.

ಅದೊಂದು ದಿನ ಕೇತಕಿ ಭಾನುವಾರದ ಬೆಳಗಿನ ತಿಂಡಿಗೆ ಮಸಾಲೆರೊಟ್ಟಿ ಮಾಡಿದ್ದಳು. ವಿವಿಧಜಾತಿಯ ಸೊಪ್ಪುಗಳೊಂದಿಗೆ ನೀರುಳ್ಳಿ, ಕಾಯಿತುರಿ ಬೆರೆಸಿದ ರೊಟ್ಟಿಯ ಘಮಲು ಎಂತವರ ಬಾಯಲ್ಲೂ ನೀರೂರಿಸುವಂತಿತ್ತು. ಗರಿಗರಿಯಾಗಿ ಬೇಯಿಸಿದ ರೊಟ್ಟಿಯ ಜೊತೆ ತಾಜಾ ಬೆಣ್ಣೆ ತಟ್ಟೆಗೆ ಬಿದ್ದಾಗ ಯಾವತ್ತೂ ಬೆಣ್ಣೆ ಕಾಣದವನಂತೆ ಕಣ್ಣರಳಿಸಿದ್ದ ನಕುಲ.

"ಇದೆಲ್ಲಿಂದ ಬಂತೇ?" ಕೇಳಿದ್ದ.

"ಒಂದು ವಾರದಿಂದ ಹಾಲಿನ ಕೆನೆ ಕೂಡಿಡ್ತಿದ್ದೆ. ರಾತ್ರಿ ಹೆಪ್ಪು ಹಾಕಿ, ಬೆಳಿಗ್ಗೆ ಬೆಣ್ಣೆ ತೆಗೆದು, ಇವತ್ತು ಮಸಾಲೆಮಜ್ಜಿಗೆ ಕೂಡಾ ಮಾಡ್ತಿದೀನಿ ಕಣೋ. ಊಟದ ಮನೇಲಿ ಮಾಡೋ ಬೆರಸಿನಮಜ್ಜಿಗೆ ಅಂದ್ರೆ ನೀನು ಮೂಗು ಕುಯ್ಸಿಸ್ಕೋತಿದ್ದಿ, ಅಲ್ವಾ?"

ತೋರುಬೆರಳಿನಿಂದ ಬೆಣ್ಣೆಯನ್ನೆತ್ತಿ ಚೀಪಿದವನು,

"ಇಂತಾ ಟ್ರಿಕ್ಸನ್ನೆಲ್ಲಾ ಇವಳಿಗೂ ಸ್ವಲ್ಪ ಹೇಳ್ಕೊಟ್ಟು ಹೋಗೇ. ಬಡಪಾಯಿಗಳು ರುಚಿಯಾಗಿ ತಿಂದ್ಕೋತೀವಿ..." ಅಂದಿದ್ದು ಉದ್ದೇಶಪೂರ್ವಕವಾಗಿರಲಿಕ್ಕಿಲ್ಲ. ಆ ಕ್ಷಣದ ಲಘು ಪ್ರತಿಕ್ರಿಯೆ ಇರಬಹುದು. ಆದರೆ ಶ್ರಾವಂತಿಯ ಅಸಮಾಧಾನ ನೆತ್ತಿಗೇರಿತ್ತು. ಇದರ ಅರಿವಿಲ್ಲದ ಕೇತಕಿ ಶ್ರಾವಂತಿಯನ್ನುದ್ದೇಶಿಸಿ ಹೇಳಿದ್ದಳು,

"ಒಂದು ವಾರದ ಕೆನೆ ಅಂದ್ರೆ ಒಂದು ದೊಡ್ಡ ಮುದ್ದೆ ಬೆಣ್ಣೆ ಬರುತ್ತೆ ಕಣೇ. ನೀವು ದುಡ್ಡು ಕೊಟ್ಟು ತುಪ್ಪ ತಗೊಳ್ಳೋದೇ ಬೇಡ."

"ನಾವೆಲ್ಲಿ ತುಪ್ಪ ತಿಂತೀವಿ?" ಮೂಗು ಮುರಿದಿದ್ದಳು ಶ್ರಾವಂತಿ. 'ನಮ್ಮ ಮನೆಯ ಪಾರುಪತ್ಯ ನಿನಗೆ ಬೇಡ' ಎಂದು ನೇರವಾಗಿ ಬಿಸಿ ಮುಟ್ಟಿಸುವುದು ಕಷ್ಟವೇನಲ್ಲ. ಆದರೆ ಅದೇನೋ ದಾಕ್ಷಿಣ್ಯ ನಾಲಿಗೆಗೆ ಅಡ್ಡ ಬರುತ್ತದೆ. ಅಥವಾ ಇದನ್ನೇ ಸಭ್ಯತೆ, ಸಂಸ್ಕಾರ ಅನ್ನುವುದಾ? ಸೂಕ್ಷ್ಮದವರಾದರೆ ಅರ್ಥ ಮಾಡಿಕೊಳ್ಳಬಹುದಾದ ನಡವಳಿಕೆ ದಡ್ಡಿ ಕೇತಕಿಗೆ ಅರ್ಥವಾಗುವುದಿಲ್ಲ, ಅಥವಾ ಅರ್ಥವಾಗದವಳಂತೆ ನಟಿಸುತ್ತಾಳೆ ಚತುರೆ. ರಜಾ ದಿನಗಳಲ್ಲಿ ಬಂದು ಕೂರಲು ಬೇಕಲ್ಲ ಒಂದು ಮನೆ? ಸೋದರಮಾವನ ಮನೆ ತೌರುಮನೆಯಾಗುವುದು ಹೇಗೆ ಸಾಧ್ಯ ಎನ್ನುವ ಕನಿಷ್ಠ ಜ್ಞಾನ ಬೇಡವೇ? ಇಂತವರು ಎಲ್ಲಾದರೂ ಇರುತ್ತಾರಾ? ಇವನೂ ಸರಿ. ಹೊರಡುವಾಗಲೆಲ್ಲಾ ತಪ್ಪದೆ ಅವಳ ಆಯ್ಕೆಯ ಸೀರೆ ಕೊಡಿಸಿ, ಹೆಂಡತಿಯ ಕೈಲಿ ಮಡಿಲು ತುಂಬಿಸಿ, ಇದೇನು ಧರ್ಮಛತ್ರ